ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ

ಸಿದ್ದಾಪುರ

ಸಿ.ಸಿ. 153/2025

| | |
|---|---|
| ಸಿ.ಡಬ್ಲ್ಯೂಃ | 1 |
| ಪಿ.ಡಬ್ಲ್ಯೂಃ | 1 |

| | | |
|---|---|---|
| **ಸಾಕ್ಷಿದಾರರ ಹೆಸರು** | ಃ | ಭಾವನಾ ಗೌಡ |
| ತಂದೆ ಹೆಸರು | ಃ | ಬಸವರಾಜ ಗೌಡ |
| ವಯಸ್ಸು | ಃ | 19 ವರ್ಷ |
| ವೃತ್ತಿ | ಃ | ವಿದ್ಯಾರ್ಥಿ |
| ವಾಸ | ಃ | ನೆಜ್ಜೂರು |

**ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 05–06–2026**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ**

ಚಾಸಾ-4 ನನ್ನ ತಾಯಿ ಇರುತ್ತಾರೆ. ಚಾಸಾ- 5 ನನ್ನ ತಂಗಿ ಇರುತ್ತಾರೆ. ನನಗೆ ಚಾಸಾ- 2 ಮತ್ತು 3 ರವರ ಪರಿಚಯ ಇರುತ್ತದೆ. ದಿಃ 26-11-2024 ರಂದು ಮದ್ಯಾಹ್ನ 3-30 ರಸಮಯದಲ್ಲಿ ನನ್ನ ತಂಗಿಯಾದ ಶ್ಯಾಮಲಾ ರವರು ತಮ್ಮ ಹಳೆಯ ಪೋನ್ ನಲ್ಲಿ ರಾಮಾ ಬಂಗಾರ್ಯ ಬೋವಿ ರವರ ಬಳಿ ಮಾತನಾಡುತ್ತಿದ್ದಾಗ ನಾನು ನಮ್ಮ ಮನೆಗೆ ಬಂದಿದ್ದು ಆಗ ನನ್ನ ತಂಗಿ ಶ್ಯಾಮಲಾ ಅವರ ಹಳೆಯ ಪೋನ್‌ನ್ನು ಕೆಳಗೆ ಬಿಸಾಕಿರುತ್ತಾರೆ.

ನಂತರ ನಾನು ಸದ್ರಿ ಪೋನನ್ನು ಎತ್ತಿಕೊಂಡು ಪರಿಶೀಲಿಸಲಾಗಿ ಅದರಲ್ಲಿ ನನ್ನ ತಂಗಿ ರಾಮಾ ಬಂಗಾರ್ಯ ಬೋವಿ ರವರ ಜೊತೆಗೆ ಪೋನನಲ್ಲಿ ಮಾತನಾಡಿದ್ದು ಕಂಡು ಬಂದಿರುತ್ತದೆ. ಆ ಸಂದರ್ಭದಲ್ಲಿ ಪೋನ ನ ಕಾಲ್ ಚಾಲ್ತಿಯಲ್ಲಿದ್ದು, ನಂತರ ನಾನು ನನ್ನ ತಂಗಿಗೆ ಬೈಯುತ್ತಿದ್ದನ್ನು ರಾಮಾ ಬಂಗಾರ್ಯ ಬೋವಿ ರವರು ಕೇಳಿಸಿಕೊಂಡು ತಕ್ಷಣ ನಮ್ಮ ಮನೆಯ ಬಳಿ ಬಂದಿರುತ್ತಾರೆ. ಆಗ ನಾನು ಮನೆಯ ಹೊರಗಡೆ ಹೋಗಿ ಏಕೆ ಬಂದಿದ್ದಿಯಾ ಎಂದು ಕೇಳಿದ್ದಕ್ಕೆ , ಆತನು ನನಗೆ ಬೇವರ್ಸಿ ಎಂದು ಹಾಗೂ ತೀರಾ ಕೆಟ್ಟ ಕೆಟ್ಟ ಶಬ್ದದಿಂದ ಬೈದಿರುತ್ತಾನೆ.

ಆಗ ನಾನು ಆತನಿಗೆ ಬೈದು ನನ್ನ ಅಮ್ಮನಿಗೆ ಹೇಳುತ್ತೇನೆ ಎಂದು ಹೇಳಿದರೂ ಸಹ ಆತನು ತನ್ನ ಬೈಕನ್ನು ನನ್ನ ಕಾಲಿನ ಮೇಲೆ ಹತ್ತಿಸಿ, ನನ್ನ ಕೈ ಕಾಲಿಗೆ ಹೊಡೆದು, ನನ್ನ ಕುತ್ತಿಯನ್ನು ಗಟ್ಟಿಯಾಗಿ ಹಿಡಿದುಕೊಂಡು ಉಸಿರು ಗಟ್ಟಿಸಲು ಪ್ರಯತ್ನಿಸಿರುತ್ತಾನೆ. ಆಗ ನಾನು ಜೊರಾಗಿ ಕಿರುಚಿಕೊಂಡರು ಸಹ ಆತನು ಕುತ್ತಿಗೆಯಿಂದ ಕೈಯನ್ನು ತೆಗೆದಿರುವುದಿಲ್ಲ. ಅಷ್ಟರಲ್ಲಿ ಸತೀಶ ಗೌಡ ಎಂಬುವವರು ನಮ್ಮ ಮನೆಗೆ ಬಂದಿದ್ದು, ಆಗ ರಾಮಾ ಬಂಗಾರ್ಯ ಬೋವಿ ರವರು ಸತೀಶ ಗೌಡ ರವರನ್ನು ನೋಡಿ ಬೈಕ ತೆಗೆದುಕೊಂಡು ಹೋಗುತ್ತಿದ್ದು, ಆಗ ನಾನು ಪೊಲೀಸ ದೂರನ್ನು ನೀಡುತ್ತೇನೆ ಎಂದು ಆತನಿಗೆ ಹೇಳಿದ್ದು, ಅದಕ್ಕೆ ಆತನು ನನ್ನ ಸಾಯಿಸುತ್ತೇನೆಂದು ಜೀವ ಬೇದರಿಕೆ ಸಹ ಹಾಕಿರುತ್ತಾನೆ.

ಆ ದಿನ ಸಂಜೆ ನಾನು ಸಿದ್ದಾಪುರ ಪೊಲೀಸ ಠಾಣೆಗೆ ಬಂದು ದೂರನ್ನು ನೀಡಿರುತ್ತೇನೇ. ನಂತರ ಸಿದ್ದಾಪುರ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ.

ಸಾಕ್ಷಿಗೆ ಈಗ ದೂರನ್ನು ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ- 1 ಎಂದು ಅದರಲ್ಲಿರುವ ಸಾಕ್ಷಿಯು ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ನಿಪಿ-(ಎ) ಎಂದು ಗುರುತಿಸಲಾಯಿತು.

ನಂತರ ದಿಃ 27-11-2024 ರಂದು ಪೊಲೀಸರು ಸ್ಥಳಕ್ಕೆ ಬಂದು ಸ್ಥಳ ಪಂಚನಾಮೆಯನ್ನು ಬೆಳಿಗ್ಗೆ 10-15 ರಿಂದ 11-30 ರವರೆಗೆ ಜರುಗಿಸಿರುತ್ತಾರೆ. ಆ ಸಂದರ್ಭದಲ್ಲಿ ಚಾಸಾ- 2 ಮತ್ತು 3 ರವರು ಸಹ ಸಾಕ್ಷಿದಾರರಾಗಿ ಹಾಜರಿರುತ್ತಾರೆ.

ಪೊಲೀಸರಿಗೆ ಸ್ಥಳ ಮಾಹಿತಿಯನ್ನು ನಾನೇ ನೀಡಿದ್ದು, ಪೊಲೀಸರು ನಕಾಶೆಯನ್ನು ತಯಾರಿಸಿ ಪೋಟೋವನ್ನು ತೆಗೆದುಕೊಂಡಿರುತ್ತಾರೆ.

ಸಾಕ್ಷಿಗೆ ಈಗ ಸ್ಥಳ ಪಂಚನಾಮೆಯನ್ನು ನ್ನು ತೋರಿಸಿದ್ದು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ.2 ಎಂದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಕಚ್ಚಾ ನಕಾಶೆಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 3 ಎಂದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಪೋಟೋವನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 4 ಎಂದು ಗುರುತಿಸಲಾಯಿತು.

ನಂತರ ದಿಃ 28-11-2024 ರಂದು ನಾನು ಪೊಲೀಸರ ಮುಂದೆ ನನ್ನ ಮುಂದುವರೆದ ದೂರನ್ನು ನೀಡಿರುತ್ತೇನೆ.

ಒಂದು ತಿಂಗಳು ಆದ ನಂತರ ನಾನು ನ್ಯಾಯಾಲಯಕ್ಕೆ ಬಂದು ನ್ಯಾಯಾಧೀಶರ ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

ಸಾಕ್ಷಿಗೆ ಈಗ ನ್ಯಾಯಾಧೀಶರ ಮುಂದೆ ನೀಡಿದ್ದ ಹೇಳಿಕೆಯನ್ನು ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 5 ಎಂದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಮತ್ತು (ಬಿ) ಎಂದು ಗುರುತಿಸಲಾಯಿತು.

( ನ್ಯಾಯಾಧೀಶರ ಮುಂದೆ ನೀಡಿದ್ದ ಚಾಸಾ- 1 ರವರ ಹೇಳಿಕೆಯು ಮುಚ್ಚಿದ್ದ ಲಕೋಟೆಯಲ್ಲಿದ್ದು ಅದನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಗಿತು)

ಆ ದಿನ ನನಗೆ ಹಲ್ಲೆ ಮಾಡಿದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ.

ಈ ಹಂತದಲ್ಲಿ ಆರೋಪಿ ಪರ ವಕೀಲರು ಆರೋಪಿಯ ಗುರುತಿಸುವಿಕೆ ತಕರಾರು ಇಲ್ಲ ಎಂದು ನುಡಿಯುತ್ತಾರೆ.

**ಪಾಟೀಸವಾಲು ಃ ಆರೋಪಿ ಪರ ವಕೀಲರಿಂದ**

ಆರೋಪಿ ಪರ ವಕೀಲರು ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದರಿಂದ ಆಲಿಸಿ ಮುಂದೂಡಲಾಯಿತು.

( ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಸ.ಒ

ಸಹಿ ಇದೆ.
ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಸಿದ್ದಾಪುರ